ಕನ್ನಡದಲ್ಲಿ ನಾವು ಓದಲೇ ಬೇಕಾದ ಒಂದು ಮುಖ್ಯ ಕವನ. 'ಸಖೀಗೀತ'ದಂತಹ ಮಹತ್ವದ ಕಾವ್ಯದ ಎದುರೂ ದಾಂಪತ್ಯಗೀತೆ ತನ್ನ ಅಸ್ಮಿತೆ ಕಳೆದುಕೊಂಡಿಲ್ಲ ಎನ್ನುವುದು ಸಾಮಾನ್ಯ ಸಾಧನೆಯೇನಲ್ಲ.

ಬೇಂದ್ರೆಯನ್ನು ನಾಡಿಗರು ಟೀಕಿಸಿ ಮಾತಾಡಿದ್ದನ್ನು ಈ ಬರವಣಿಗೆಯ ಮೊದಲಲ್ಲಿ ಪ್ರಸ್ತಾಪಿಸಿದ್ದೇನೆ. ಆದರೆ ಕೊನೆಕೊನೆಗೆ ಬೇಂದ್ರೆ ಅವರ ಕಾವ್ಯಗುರುವೇ ಆಗಿಬಿಟ್ಟರು. ಬೇಂದ್ರೆ ಕಾವ್ಯವನ್ನು ಕುರಿತೇ ತಮ್ಮ ಪಿಎಚ್.ಡಿ. ಪ್ರಬಂಧವನ್ನು ನಾಡಿಗರು ರಚಿಸಿದರು. ಅದೊಂದು ಗಹನಗಂಭೀರವಾದ ಬೇಂದ್ರೆ ಕಾವ್ಯಾಭ್ಯಾಸಿಗಳೆಲ್ಲಾ ಓದಲೇ ಬೇಕಾದ ಸಂಶೋಧನ ಕೃತಿ. ಪ್ರಾರಂಭದಲ್ಲಿ ಅಡಿಗರ ಕಾವ್ಯದೊಂದಿಗೆ ವಿಚಿತ್ರ ತಾದಾತ್ಮ್ಯ ಹೊಂದಿದ್ದ ನಾಡಿಗರು ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯದ ಬಗ್ಗೆ ಒಂದು ಬಗೆಯ ಉಪೇಕ್ಷೆಯ ಭಾವನೆಯನ್ನೇ ಹೊಂದಿದ್ದರು. ಆದರೆ ಕೊನೆಕೊನೆಗೆ ಕೆ.ಎಸ್.ನ ಕನ್ನಡದ ಮೇಜರ್ ಕವಿಯೆಂದು ಆಧಾರಪೂರ್ವಕವಾಗಿ ಬರೆದರು! ಅವರ ಅನೇಕ ಕವಿತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದರು!

ನಾಡಿಗರ ಮೂಲಶೋಧನೆಯ ಗೀಳನ್ನು ಸಾಮಾನ್ಯವಾಗಿ ಅವರನ್ನು ಟೀಕಿಸುವಾಗ ಪ್ರಸ್ತಾಪಿಸಲಾಗುತ್ತದೆ! ಅವರು ಅನಂತಮೂರ್ತಿಯವರ 'ಮೌನಿ' ಕತೆಯ ಬಗ್ಗೆ ಎಬ್ಬಿಸಿದ ದೂಳನ್ನು ನಾನು ಇನ್ನೂ ಮರೆತಿಲ್ಲ. ತಮ್ಮ ಸರೀಕರೊಂದಿಗೆ ನಾಡಿಗರಿಗೆ ಬಗೆ ಹರಿಯದ ಜಗಳಗಳಿದ್ದವು. ಅನಂತಮೂರ್ತಿ, ನಿಸಾರ್ ಅಹಮದ್ ಮೊದಲಾದವರನ್ನು ಟೀಕಿಸುತ್ತಿದ್ದರು! ಈ ಪೂರ್ವಗ್ರಹಗಳನ್ನು ನಾಡಿಗರು ಗೆಲ್ಲಬಾರದೆ ಎಂದು ನಾನು ಯಾವಾಗಲೂ ಹಪಹಪಿಸುತ್ತಿದ್ದೆ! ನಾಡಿಗರ ವ್ಯಕ್ತಿತ್ವವೇ ಹಾಗೆ. ಇನ್ನೊಬ್ಬರ ಆಸರೆಗೆ ಅವರು ಯಾವಾಗಲೂ ನುಗ್ಗುತ್ತಿದ್ದರು. ತಮಗೆ ಇಷ್ಟವಾದದ್ದನ್ನು ಮುಕ್ತವಾಗಿ ಕೊಂಡಾಡುತ್ತಿದ್ದರು. ತಮಗೆ ಇಷ್ಟವಾಗದ್ದನ್ನು ಖಂಡತುಂಡಾಗಿ ವಿಚ್ಛೇದಿಸುತ್ತಿದ್ದರು. ಗಟ್ಟಿಯಾಗಿ ಹಲ್ಲುಕಚ್ಚಿ ಮಾತಾಡುತ್ತಾ, ಗಟ್ಟಿಯಾಗಿ ನಗುತ್ತಾ, ಅದ್ಭುತವಾಗಿ ತಮ್ಮ ಕವಿತೆಗಳನ್ನು ಓದುತ್ತಾ ನಾಡಿಗ ನಮ್ಮಂಥ ಅನೇಕ ಗೆಳೆಯರಿಗೆ ಪ್ರಿಯರಾಗಿ ಯಾವಾಗಲೂ ನಮ್ಮೊಂದಿಗಿರುತ್ತಾರೆ.

## ಎಚ್.ಎಸ್. ವೆಂಕಟೇಶ ಮೂರ್ತಿ

ಕನ್ನಡದ ಮುಖ್ಯಕವಿ ಎಚ್ಎಸ್‌ವಿ ಹುಟ್ಟಿದ್ದು ಚನ್ನಗಿರಿ ತಾಲ್ಲೂಕಿನ ಹೋದಿಗ್ಗೆರೆ ಗ್ರಾಮದಲ್ಲಿ. ಪ್ರಾಥಮಿಕ ಶಿಕ್ಷಣ ಹೋದಿಗ್ಗೆರೆ, ಹೊಳಲ್ಕೆರೆಗಳಲ್ಲಿ. ಕಾಲೇಜು ವಿದ್ಯಾಭ್ಯಾಸ ಚಿತ್ರದುರ್ಗ, ಭದ್ರಾವತಿಯಲ್ಲಿ. ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ., ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದಿದ್ದಾರೆ. ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರು. 'ಸಿಂದಬಾದನ ಆತ್ಮಕಥೆ', 'ಕ್ರಿಯಾಪರ್ವ', 'ಒಣಗಿದ ಮರದ ಗಿಳಿಗಳು', 'ಋತುವಿಲಾಸ', 'ಎಷ್ಟೊಂದು ಮುಗಿಲು', 'ಅಮೆರಿಕದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಭೂಮಿಯೂ ಒಂದು ಆಕಾಶ' ಅವರ ಕೆಲವು ಕವನ ಸಂಗ್ರಹಗಳು.